Regd No M 1299 SATYAVADI

ಸತ್ಯವಾದಿ

(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟುದು)

ಸಂಪುಟ 31 ಸಂಚಿಕೆ 99] ಬುಧವಾರ 18—2—48 [ಬಿಡಿ ಪ್ರತಿ 3 ಪೈ

ಈ ವಾರದ ಭವಿಷ್ಯ

(ಓಂ ಜ್ಯೋತಿಷ್ಯರಿಂದ)

ಮೇಷ— ವ್ಯವಹಾರದಲ್ಲಿ ವಿಘ್ನಗಳ ಭಯ. ಆದರೂ ಕೈಗೊಂಡ ಕಾರ್ಯಗಳು ನೆರವೇರುವುವು; ಖರ್ಚು ಹೆಚ್ಚು

ವೃಷಭ — ಕರ್ತವ್ಯಪರಾಯಣರಾದಲ್ಲಿ ಜಯಲಾಭವಿರುತ್ತದೆ. ಮನಸ್ಸು ಗಡಿಬಿಡಿಯಾಗಿರುತ್ತದೆ, ಖರ್ಚು ಹೆಚ್ಚು ಧನಲಾಭವೂ ಉಂಟು

ಮಿಥುನ — ಉತ್ಸಾಹಿತರಾಗಿರಿ, ನಿಮ್ಮ ಕಾರ್ಯಗಳಲ್ಲಿ ಜಯಸಿದ್ಧ: ಆರೋಗ್ಯವೂ ವ್ಯವಹಾರದಲ್ಲಿ ಲಾಭವೂ ಚೆನ್ನಾಗಿರುತ್ತೆ

ಕರ್ಕಾಟಕ— ಮಿತ್ರರ ಸಹಾಯದಿಂದ ಲಾಭ ; ಶರೀರಸ್ಥಿತಿ ಚೆನ್ನಾಗಿರುವದು ಆದರೆ ಮನೋಸ್ಥಿತಿ ನೆಟ್ಟಗಿರದು

ಸಿಂಹ— ಮರನೆಹೆಚ್ಚು, ಆರೋಗ್ಯವಿರದು, ವ್ಯವಹಾರದಲ್ಲಿ ತೊಂದರೆ

ತುಲ— ಕಾರ್ಯಸಿದ್ಧಿ, ಅಪ್ಪರ ಸಮಾಗಮ, ಸಾಂಪತ್ತಿಕ ಲಾಭ

ವೃಶ್ಚಿಕ— ಆರೋಗ್ಯ ಉಂಟು, ವ್ಯವಹಾರದಲ್ಲಿ ಅನುಕೂಲವುಂಟು, ಮಿತ್ರ ಲಾಭವುಂಟು

ಧನಸ್ಸು — ಧರ್ಮಕಾರ್ಯಗಳೆಲ್ಲಿ ಮನಸ್ಸು ಹೋಗುತ್ತದೆ

ಮಕರ — ಆರೋಗ್ಯವಿರುವದಿಲ್ಲ, ವಿರೋಧಿಗಳ ಕಾಟವೂ ಖರ್ಚೂ ಹೆಚ್ಚಾಗಿದೆ

ಕುಂಭ— ಶತ್ರುಗಳಿಂದ ಜಾಗ್ರತೆಯಾಗಿಬೇಕಾದ ವಾರ, ಆರೋಗ್ಯವುಂಟು, ಅಪಮಾನದ ಭಯವಿದೆ

ಮೀನ— ಶಾಂತತೆ ಅವಶ್ಯಕ, ಆರೋಗ್ಯವುಂಟು, ಕಾರ್ಯಸಿದ್ಧಿಯಾಗುತ್ತದೆ

ಟೆಂಡರ್ ನೋಟೀಸು

ಮೈಸೂರು ಅರಮನೆಗೆ 1948—49 ನೇ ಸಾಲಿಗೆ ಸಪ್ಲೈ ಆಗಬೇಕಾದ ದಿನಸಿ ವಗೈರೆ ಸಾಮಾನುಗಳಿಗಾಗಿ ಮೊಹರು ಮಾಡಲ್ಪಟ್ಟ ಟೆಂಡರುಗಳು ಈ ಕೆಳಗೆ ರುಜು ಮಾಡಿರುವವರಿಂದ 19—2—1948 ನೇ ಗುರುವಾರ ಮಧ್ಯಾಹ್ನ 3 ಗಂಟೆ ಒಳಗೆ ತೆಗೆದುಕೊಳ್ಳಲ್ಪಡುತ್ತದೆ.

ಹೆಚ್ಚಿನ ಮಾಹಿತಿಗಳನ್ನು ಭೋಜನಶಾಲೆಯ ಮುನೀಬರಿಂದ ಪಡೆದು ವಿಷಯಗಳನ್ನು ತಿಳಿದುಕೊಳ್ಳಬಹುದು.

ಎಚ್. ನಿರಂಜನರಾಜೆ ಅರಸ್
ಸೆಕ್ರೆಟರಿ

ಮೈಸೂರಿಗೆ 30000 ಟನ್ ಅಕ್ಕಿ ಬೇಕು

ಪೌರಸಭಾಧ್ಯಕ್ಷರ
ಪತ್ರಿಕಾ ಸಮ್ಮೇಳನ

ರಾಜಧಾನಿಯ ಪೌರಸಭಾಧ್ಯಕ್ಷರಾ ಶ್ರೀ ಪಾಲಹಳ್ಳಿ ಸೀತಾರಾಮಯ್ಯನವರು ಈ ದಿನ ಬೆಳಿಗೆ ಪತ್ರಿಕಾ ಸಮ್ಮೇಳನ ನಡೆಸಿ, ನಗರದ ಪ್ರಜಾನುಕೂಲಕ್ಕೆ ಮಾಡಲಿರುವ ಕಾರ್ಯಗಳನ್ನು ವಿವರಿಸಲಾಯಿತು. ನೀರಿನ ಸರಬರಾಜಿನ ಪರಿಸ್ಥಿತಿ ಉತ್ತಮಪಡಿಸಲಾಗುವದೆಂದೂ ವಾಸದ ಮನೆಗಳ ಅಭಾವ ನಿವಾರಿಸಲು ಪ್ರಯತ್ನಿಸಲಾಗುವುದೆಂದೂ, ಆರೋಗ್ಯಕುಂದಕ ತರುವ ಬೀದಿಗಳಲ್ಲಿ ಮಾರಲಾಗುವ ತಿಂಡಿ ಬಗ್ಗೆ ತಕ್ಕ ಕಾರ್ಯಕ್ರಮ ಕೈಗೊಳ್ಳಲಾಗುವುದೆಂದೂ ತಿಳಿಸಿದರು. ಗಾಂಧೀಜೀಯವರ ಅತ್ಮ ಶಾಂತಿಗಾಗಿ ಮಂಡಿಮೊಹಲ್ಲಾ ತೊಗರೀ ಬೀದಿಯಲ್ಲಿರುವ ಶ್ರೀ ವೆಂಕಟರಮಣ ಸ್ವಾಮಿ ದೇವಾಲಯಕ್ಕೆ ಈ ಸಂಜೆ ಹರಿಜನ ಪ್ರಾರ್ಥನೆ ಏರ್ಪಡಿಸಲಾಗಿದೆಯೆಂದು ತಿಳಿಸಿದರು.

ಬೆಂಗಳೂರು ಫೆ 17.... ಭಾರತ ಸರಕಾರದ ಆಹಾರ ಮಂತ್ರಿ ದೌಲತ್ ರಾಂರವರಿಗೆ ಮೈಸೂರಿನ ಆಹಾರ ಪರಿಸ್ಥಿತಿಯನ್ನು ಸಂಸ್ಥಾನದ ಸಚಿವರು ವಿವರಿಸಿ, 30 ಸಾವಿರ ಟನ್ ಅಕ್ಕಿ ಬೇಕೇ ಬೇಕೆಂದಿರುವರು

ಜಂಂಸಗರ.... ಕಾಥಿವಾಡ ಸಂಯುಕ್ತ ಸಂಸ್ಥಾನ ಸ್ಥಾಪಿತವಾಯಿತು,

ಬೆಳಿಗಳೂರು—ರೈಲ್ವೆ ಕೆಲಸಗಾರರ ಸಂಘದ ಪ್ರಮುಖರೂ ಆ ಸಂಸ್ಥೆಯ ಪ್ರಕಟಣಾಧಿಕಾರಿಗಳೂ ಮತ್ತು ಇಲಾಖೆಯಲ್ಲಿ ಗಾರ್ಡ್ ಆದ ಶ್ರೀ ಕೆ. ಎಸ್. ಮೂರ್ತಿಯವರನ್ನು ಕೆಲಸದಿಂದ ವಜಾಮಾಡಲಾಗಿದೆಯೆಂದು ತಿಳಿಯಬಂದಿದೆ.

ಐಟಿಯಾಲ್

ಟ್ರೇಡ್ ITL ಮಾರ್ಕ್

ಐಟಿಯಾಲ್ ಒಂದು ಅದ್ಭುತ ಕ್ರಿಮಿನಾಶಿನಿ. ಗೊತ್ತಾದ ಪ್ರಮಾಣದಲ್ಲಿ ನೀರಿನೊಡನೆ ಬೆರಿಸಿ, ಗಾಯಗಳನ್ನು ತೊಳೆಯುವುದು, ಪಾಯಿಲೆಯವರ ಕೂತಡಿಗಳನ್ನು ತೊಳೆಯುವುದು, ಬಟ್ಟೆಗಳನ್ನು ಒಗೆದು ಶುಚಿ ಮಾಡುವುದು. ಇತ್ಯಾದಿ ಕೆಲಸಗಳಿಗೆ ನೆಂವಾಗುವ ಸಂಸಾರ ಸೇವಕ.

ಹಿತವಾದ ಇದರ ವಾಸನೆಯು ಮನಸ್ಸನ್ನು ಹರ್ಷಗೊಳಿಸುವುದು.

ಎಲ್ಲಾ ಪ್ರಮುಖ ಔಷಧಿವ್ಯಾಪಾರಿಗಳಲ್ಲಿಯೂ ಬೆಲೆಗೆ ದೊರೆಯುವುದು.

— ತಯಾರಿಕರು —

The Mysore Industrial & Testing Laboratory Ltd.
Malleswaram P. O. Bangalore

ವರ್ತಮಾನಗಳು

ಮದರಾಸು—ರಾಷ್ಟ್ರಗೀತೆಯಲ್ಲಿ 'ರಘುಪತಿ ರಾಘವ ರಾಜಾರಾಂ' ಭಜನೆಯನ್ನು ಒಂದು ಭಾಗವಾಗಿ ಸೇರಿಸಬೇಕೆಂದು ದಕ್ಷಿಣ ಭಾರತ ಚಲನಚಿತ್ರ ಸಂಸ್ಥೆಯ ಅಧ್ಯಕ್ಷರು ಪಂ|| ನೆಹರೂ ರವರಿಗೆ ಬರೆದಿದ್ದಾರೆ.

ರಾಕ್ಸಾಲು ಮೂಲಕ ನೇಪಾಳ-ಇಂಡಿಯಾ ಮೋಟಾರು ರಸ್ತೆ ನಿರ್ಮಾಣ ಪ್ರಾರಂಭವಾಗಿದೆ.

ತಿರುವೇಂದ್ರಂ— ತಿರುವಾಂಕೂರು ಫ್ರೀ ಡೆಡ್ ಸ್ಕೂಲು ಮಾಸ್ಟರುಗಳು ಸತ್ಯಾಗ್ರಹ ಪ್ರಾರಂಭಿಸಿರುವರು.

ತಲಚೇರಿ— ಮುನಿಯಾರ್ಡರು ಹದುರುಪಯೋಗ ಪಡಿಸಿಕೊಂಡ ಫ್ರೌಢ ಸ್ಕೂಲು ಮಾಸ್ಟರು ಕೃಷ್ಣ ಎಂಬಾತನಿಗೆ 3 ವರ್ಷ ಕಠಿಣ ಸಜಾ.

ನವದೆಹಲಿ— ಹಿಂದೂ ಮಹಾಸಭೆ ರಾಜಕೀಯ ಸನ್ಯಾಸತಗೆದುಕೊಳ್ಳಲೂ ನೆಹರೂ ಸರಕಾರಕ್ಕೆ ಬೆಂಬಲವೀಯಲೂ ನಿರ್ಣಯಿಸಿದೆ.

ನವದೆಹಲಿ— ಭೂಪಾಲದ ನವಾಬರು ಪಾಕಿಸ್ತಾನದ ಗೌರ್ನರ್ ಜನರಲ್ಲಾಗುವರೆಂದೂ, ಜಿನ್ನಾರವರು ವಿಶ್ರಾಂತಿ ಪಡೆಯುವರೆಂದೂ ಹೇಳಲಾಗಿದೆ.

ಬೆಂಗಳೂರು — ಸಂಸ್ಥಾನದಿಂದ ಕಾಶ್ಮೀರಕ್ಕೆ ಹೊರಟ ಎರಡನೇ ಬೆಟಾಲಿಯನ್ ಪಡೆಗೆ ಸ್ಪ || ರೆಡ್ಡಿಯವರು ಸತ್ಕಾರವಿತ್ತರು. ಈ ಸೈನಿಕರಿಗೆ ಮಹಾಸ್ವಭುಗಳು ಶುಭವನ್ನು ಕೋರಿಯೂ ಸಂಸ್ಥಾನಕ್ಕೆ ಕೀರ್ತಿ ತರಬೇಕೆಂದೂ ಸಂದೇಶವಿತ್ತಿರುವರು.

Woodlands

From 13—2—48

Federal Operator 99

A must-be-seen Picture
holds you spell bound
from start to finish

Daily 3 Shows

At Opera

ಯಶಸ್ವಿ 4 ನೇ ವಾರ

ಕನ್ನಾಂಬಾ, ಚಿನ್ನಪ್ಪ
ಕೃಷ್ಣ, ಮಧುರಂ
ಪಾತ್ರವಹಿಸಿರುವ

ಕನಕ

ತಾ || 16-2-48 || ಶ್ರೀ || ನಂ. 75

"ಪ್ರ ಬೋ ಧ"

ಮೈಸೂರು ದೇಶೀಯ ವರ್ಣಾಶ್ರಮ ಸ್ವರಾಜ್ಯ ಸಂಘದ
ಬೋಧಪ್ರದ ಸಪ್ತಾಹಿಕ ಪ್ರಕಟನಮಾಲೆ

ಸಂಪಾದಕ ; ಗುಂಡ್ಮಿ ಮಹಾಬಲಭಟ್ಟ, ವೇದಾಂತಶಿರೋಮಣಿ ವೇಗಾಂತಪಕಾರದ
ಸಂಘದ ಕಾರ್ಯದರ್ಶಿ, ದೂರ್ವಾಸಪುರಂ, ಶಿವಮೊಗ್ಗಾ ಜಿಲ್ಲಾ

ದೇವಾಲಯ ಪ್ರವೇಶ

(ಕಳೆದ ಸಂಚಿಕೆಯಿಂದಮುಂದುವರಿದುದು)

ಎರಡನೆಯದಾಗಿ ' ಅಸ್ಪೃಶ್ಯತೆಯು ಹಿಂದೂ ಜಾತಿಯ ಕಲಂಕ ' ವೆನ್ನುವರು. ಈಗ ಅಸ್ಪೃಶ್ಯತೆಯು ಹಿಂದೂ ಜಾತಿಗೆ ಕಲಂಕವೇ ಅಥವಾ ಶೋಭೆಯೇ ಎಂಬುದನ್ನು ವಿಚಾರಿಸೋಣ

ಜಗತ್ತಿನಲ್ಲಿ ಶುದ್ಧಿಯ ಅನುಮಾಪಕವು ಅಸ್ಪೃಶ್ಯತೆ. ಹಿಂದುಗಳಲ್ಲಿ ಸ್ಪೃಶ್ಯಾಸ್ಪೃಶ್ಯತೆ ಇರುವುದೇ ಹಿಂದೂ ಜಾತಿಯಲ್ಲಿ ಶುದ್ಧಿಯು (ಶೌಚ) ಈಗಲೂ ನೆಲೆಸಿದೆ ಎಂಬುದಕ್ಕೆ ದೊಡ್ಡ ಪ್ರಮಾಣವಾಗಿದೆ. ಎಲ್ಲಿ ಸ್ಪೃಶ್ಯಾಸ್ಪೃಶ್ಯತೆ ಇಲ್ಲವೋ, ಅಲ್ಲಿಂದ ಶುದ್ಧಿಯು ಎದ್ದುಹೋಗಿದೆ ಎಂಬುದರಲ್ಲಿ ಸಂಶಯವಿಲ್ಲ. ' ಶೌಜಾತ್ ಸ್ವಾಂಗಜುಗುಪ್ಸಾ ಪರೈಂಸಂಸರ್ಗಶ್ಚ ' ಎಂದು ಯೋಗಶಾಸ್ತ್ರದಲ್ಲಿ ಹೇಳಿದೆ ಅಂದರೆ ಶುದ್ಧವಾಗಿರುವುದರಿಂದ ತಮ್ಮದೇ ಅಂಗಗಳಲ್ಲಿ ತಿರಸ್ಕಾರ ಉಂಟಾಗುತ್ತದೆ. ಅವನು ಬೇರೆಯವರನ್ನು ಮುಟ್ಟಲಿಚ್ಛಿಸುವುದಿಲ್ಲ. ಇಂದು ಭಾರತದ ಸಂತಾನಗಳಲ್ಲಿ ಅದೆಷ್ಟು ಅಶುದ್ಧಿ ಬಂದಿದೆಯೆಂದರೆ ಅವರಿಗೆ ಸ್ಪೃಶ್ಯಾಸ್ಪೃಶ್ಯತ್ವವು ಕಳಂಕವಾಗಿ ತೋರುತ್ತದೆ !

ಒಂದು ವಸ್ತುವಿನೊಂದಿಗೆ ಏನಾದರೊಂದು ಪ್ರದಾನಪ್ರದಾನ ಮಾಡದೆ ನಾವದನ್ನು ಮುಟ್ಟಲಾರೆವು. ಆದ್ದರಿಂದ ನಮ್ಮದೇ ಮಾರ್ಮಿಕ ಅಂಗಗಳನ್ನು, ಅಶುದ್ಧಿ ಲೇಪದ ಸಂಸರ್ಗವು ಅಧಿಕವಾಗಿರುವುದರಿಂದ, ಸ್ಪರ್ಶಮಾಡುವುದಿಲ್ಲ. ಇದರಿಂದ ಆ ಅಂಗದ ಅನಾದರವೂ ಅಲ್ಲ, ಅದು ಕಡಮೆ ಪ್ರಿಯವಾದುದೂ ಅಲ್ಲ ಮತ್ತದರ ಕಾರ್ಯಕಾರಿತೆಯ ಮೇಲೆ ಆಕ್ಷೇಪವೂ ಅಲ್ಲ. ಅದರ ಕಾರ್ಯವೇ ಅಂತಹುದು, ಅದರ [illegible] ವು ಮಲಿಲೇಪದೊಂಗಿರುತ್ತದೆ ಆದುದರಿಂದ ಅದು ಸಾಮಾನ್ಯವಾಗಿ ಅಸ್ಪೃಶ್ಯವಾಗಿದೆ ಈ ನಿಯಮವು ಎಲ್ಲಾ ಸಭ್ಯ ಸಮಾಜದಲ್ಲಿ ಮಾನ್ಯವಾಗಿರುವಾಗ, ಮತ್ತೆ ಈ ನಿಯಮದ ಉದಾರ ಪ್ರಯೋಗ ಮಾಡುವುದರಿಂದ, ಇದು ಕಲಂಕವಾದುದು ಹೇಗೆ ?

ಒಂದು ವಿಷಯದ ಮೇಲೆ ತಿಳಿದೋ ತಿಳಿಯದೆಯೋ ಏನಾದರೊಂದು ಹೇಳಿಬಿಡುವುದು: ಈ ನಿರರ್ಗಳವಾದ ಕಾಲದಲ್ಲಿ, ಜನರ ಸ್ವಭಾವವಾಗಿ ಬಿಟ್ಟಿದೆ. ಸ್ಪೃಶ್ಯಾಸ್ಪೃಶ್ಯತೆಯು ನಿಯಮಗಳು ಕೃಷ್ಣ ಮುರಲ್ಮಾ ಮುಂತಾದ ಎಲ್ಲಾ ಸಮಾಜಗಳಲ್ಲಿ ಒಂದಿಲ್ಲೊಂದು ರೂಪದಲ್ಲಿ ನೆಲೆಸಿವೆ ಸ್ಪೃಶ್ಯಾಸ್ಪೃಶ್ಯತೆಯನ್ನು ಸಮಾಜದಿಂದ್ಹೊರಹಾಕುವ ಸಾಮರ್ಥ್ಯವು ಸಭ್ಯ ಸಮಾಜಕ್ಕೆ, ಅದು ಸಭ್ಯವಾಗಿರುವವರೆಗೆ ಇರಲಾರದು. ಆದಾಗ್ಯೂ ಅಸ್ಪೃಶ್ಯತೆಯು ಹಿಂದೂಜಾತಿಯ ಕಲಂಕವೆಂದು ಹೇಳಿಬಿಡುವುದು ತಿಟ್ಟತನವಲ್ಲದೆ ಬೇರೇನಿದ್ದೀತು ?

ಅವರು ಮಾಲಿನ್ಯಪನ್ನ-ಅಸ್ಪೃಶ್ಯ ವೆಂದು ತಿಳಿಯುತ್ತಾರೆಂಬುದರಲ್ಲಿ ಸಂದೇಹವಿಲ್ಲ. ಮಲಿನ ಪುರುಷನೊಬ್ಬನನ್ನು ಸ್ನಾನಮಾಡಿಸಿ ಸ್ವಚ್ಛ ವಸ್ತ್ರವನ್ನುಡಿಸಿ ತಂದರೆ ಅವನನ್ನು ಮುಟ್ಟುವುದರಲ್ಲಷ್ಟಕ್ಕೆ ಸಂಕೋಚವಾಗದು. ಆದರೆ, ನಾವು ಅವರಿಗಿಂತ ಎಂಡು ಹೆಜ್ಜೆ ಮುಂದೆ ಹೋಗುವೆವು. ಮಾಲಿನ್ಯದ ಸಂಬಂಧವು ಕೇವಲ ತಾತ್ಕಾಲಿಕವಾದುದಲ್ಲವೆಂದು ನಮಗೆ ಗೊತ್ತು. ತಲೆತಲಾಂತರದಿಂದ ಮಲಿನನಾಗಿ ಬಂದವನ ಅಣುಪರಮಾಣುವಿನಲ್ಲಿ ಮಾಲಿನ್ಯವು ಹೊಕ್ಕಿಕೊಂಡಿದ್ದು ಅದು ಒಂದು ದಿನದಲ್ಲಿ ಶುದ್ಧವಾಗಲಾರದು. ರೋಗವೂ ಮಾಲಿನ್ಯವೇ ಆದರೂ ಮಾಲಿನ್ಯವು [illegible] ಕ್ರಮದಿಂದ ಬರುತ್ತದೆ. ಆದ್ದರಿಂದ ಸ್ಪೃಶ್ಯಾಸ್ಪೃಶ್ಯತೆಯಲ್ಲಿ ವಂಶಾನುಕ್ರಮವೂ ಕಾರಣವಾಗಿದೆ. ಆದಕಾರಣ ಈ ವಿಷಯದಲ್ಲಿ ನಾವೂ ಇತರರಿಗಿಂತ ಚ್ಚು ಸಮುನ್ನತರಾಗಿದ್ದೇವೆ. ಅಂತೂ ಅಸ್ಪೃಶ್ಯತೆಯು ಕಲಂಕವಲ್ಲ, ವಿಚಾರ ಶೀಲರಿಗೆ ಇದು ಶೋಭೆಯಾಗಿದೆ.

ಮೂರನೆಯ ಮಾತು ' ಸ್ವಯಂ ಗಾಂಧೀಜೀ, ಮುತ್ತಿತರ ನೂನ್ಯ ಮುಖಂಡರು ಅಸ್ಪೃಶ್ಯತೆಯನ್ನು ತೊಲಗಿಸಲಪೇಕ್ಷಿಸುತ್ತಾರೆ ಎಂಬುದು ಇದಕ್ಕೆ ನನ್ನ ಉತ್ತರವೇನೆಂದರೆ— ಇತರ ಮುಖಂಡರ ವಿಷಯದಲ್ಲಿ ನನಗೆ ತಿಳಿಯದು. ಆದರೆ ಗಾಂಧೀಜೀ ಅಸ್ಪೃಶ್ಯತೆಯನ್ನು ಮನ್ನಿಸುತ್ತಾರೆ. ಜನರು ಯಾವ ರೀತಿಯಲ್ಲಿ ಸ್ಪೃಶ್ಯಾಸ್ಪೃಶ್ಯತೆಯನ್ನು ಮನ್ನಿಸುತ್ತಿಲ್ಲವೋ, ಆ ರೀತಿಯಲ್ಲಿ ನನಗೆ ವಿರೋಧವಿದೆಯೆಂದು ಅವರು ಹೇಳಿಕೆ. ಅಂದರೆ ತಿರಸ್ಕಾರ ಅಥವಾ ದ್ವೇಷಮೂಲಕವಾದ ಸ್ಪೃಶ್ಯಾಸ್ಪೃಶ್ಯತೆಗೆ ಅವರು ವಿರೋಧಿಗಳು, ಧರ್ಮಮೂಲಕವಾದ ಸ್ಪೃಶ್ಯಾಸ್ಪೃಶ್ಯತೆಗೆ ವಿರೋಧಿಗಳಲ್ಲ, ಧರ್ಮಸಂಘದ ಕಾರ್ಯದರ್ಶಿಗಳ ಪ್ರತ್ಯುತ್ತರವೀಯುತ್ತಾ ಅವರು ಈ ಮಾತನ್ನೊಪ್ಪಿಕೊಂಡಿರುವರು. ಆದರೆ ಅವರ ಆಚಾರವು ಧರ್ಮಮೂಲಕವಾದ ಸ್ಪೃಶ್ಯಾಸ್ಪೃಶ್ಯತೆಗೆ ವಿರುದ್ಧವಾಗಿದೆ ಎಂಬುದು ನನಗೆ ಗೊತ್ತಿದೆ, ಆದಾಗ್ಯೂ ತರ್ಕದ ವೇಳೆಯಲ್ಲಿ ಅವರೂ ಸಹಾ ಸ್ಪೃಶ್ಯಾಸ್ಪೃಶ್ಯತೆಯು ಸಿದ್ಧಾಂತವನ್ನು ಒಪ್ಪಿಕೊಳ್ಳಬೇಕಾಗಿದೆ. ಮಹಾಮನಾಮಾಲವೀಯರಾದರೋ ಸ್ಪೃಶ್ಯಾಸ್ಪೃಶ್ಯದ ಸಿದ್ಧಾಂತಾನುಸಾರವಾಗಿ ಆಚರಣೆಯನ್ನೂ ಮಾಡುತ್ತಿದ್ದರು.

ಆದಾಗ್ಯೂ ನಾವು ಹೇಳುವುದೇನೆಂದರೆ— ಮುಂದಾಳುಗಳು ಸ್ಪೃಶ್ಯಾಸ್ಪೃಶ್ಯತೆ ಮನ್ನಿಸದಿರುವುದಕ್ಕೆ ಕಾರಣವಿದೆ. ದುಂಡುಮೇಜಿನ ಪರಿಷತ್ತಿನಲ್ಲಿ ಅಂದಿನ ನಮ್ಮ ಗೌರಾಂಗ ಮಹಾಪ್ರಭುಗಳು—' ನೀವು ಕೋಟಿಗಟ್ಟಲೆ ಸಂಖ್ಯೆಯಲ್ಲಿ ನಿಮ್ಮ ದೇಶಬಂಧುಗಳನ್ನು, ವಿಜಿತರಾದ ಕಾರಣ, ಅಸ್ಪೃಶ್ಯರನ್ನಾಗಿ ಮಾಡಿಟ್ಟಿದ್ದೀರಿ. ಹೀಗಿರುವವರೆಗೆ ನಿಮಗೆ ಸ್ವರಾಜ್ಯವು ಹೇಗೆ ಸಿಕ್ಕೀತು ? ' ಎಂದು ಹೇಳಿದ್ದರು. ಇದಕ್ಕೆ ಉತ್ತರ ದೊರೆಯದ ಕಾರಣ ಭಾರತಕ್ಕೆ ಮರಳುತ್ತಲೇ ಅಸ್ಪೃಶ್ಯೋದ್ಧಾರಣೆಯನ್ನು ನಡೆಸಲಾಯಿತು. ಅದೇ ಈಗಲೂ ನಡೆಯುತ್ತಿದೆ. [ಸಶೇ

ಧರ್ಮಸಮ್ಮೇಳನ

ಕುಂಭಮೇಲಾ ಸಂತೆ ಫುಟಿ ಫೆ 11

ಅಖಿಲ ಭಾರತ ಗೋರಕ್ಷಣಾ ಸಮ್ಮೇಳನವು ತಾ || 9 ಮಧ್ಯಾಹ್ನ ಅಲಹಾಬಾದು ಧರ್ಮಸಭಾದಲ್ಲಿ ಸಂ || ಮಾಧವಾಚಾರ್ಯರ ಅಧ್ಯಕ್ಷತೆಯಲ್ಲಿ ನಡೆಯಿತು. ಶ್ರೀ ಸ್ವಾಮಿ ಕರಪಾತ್ರಜೀಯವರೂ ಮತ್ತಿತರರೂ ಸ್ಫೂರ್ತಿದಾಯಕ ಭಾಷಣ ಮಾಡಿದರು. ಸಂಜೆ ಧರ್ಮವೀರ ದಳದ ಸಮ್ಮೇಳನವು ಶ್ರೀ ದ್ವಾರಕಾ ಪೀಠದ ಜಗದ್ಗುರುಗಳ ಅಧ್ಯಕ್ಷತೆಯಲ್ಲಿ ನಡೆಯಿತು. ಅಧ್ಯಕ್ಷರು ತಮ್ಮ ಹೃದಯಂಗಮ ಭಾಷಣದಲ್ಲಿ ಧರ್ಮವೀರರನ್ನು ಕೊಂಡಾಡಿ ಸರ್ಟಿಫಿಕೇಟುಗಳ ಮೂಲಕ ಅವರ ಸೇವೆಯನ್ನು ಪ್ರಶಂಸಿಸಿದರು. ಮತ್ತು ಎಲ್ಲಾ ಸನಾತನಿಗಳೂ ಧರ್ಮವೀರದಳಕ್ಕೆ ಸೇರಿ ಧರ್ಮಯುದ್ಧವು ವಿಜಯಿಯಾಗಲು ಸಹಕರಿಸಬೇಕೆಂದು ವಿನಂತಿಸಿದರು.

ಜ್ಯೋತಿಷ್ಪೀಠದ ಮತ್ತು ಶಾರದಾ ಪೀಠದ ಜಗದ್ಗುರು ಮಹಾಂತರುಗಳನ್ನು ತ್ರಿವೇಣಿ ಸ್ನಾನಕ್ಕೆ, ಅಶ್ವ ಮತ್ತು ಕಾಲಾಳು ಪೋಲೀಸರು ಮಹಾತ್ಮರುಗಳು ಮತ್ತು ಲಕ್ಷಾಂತರ ಜನರಿಂದ ಕೂಡಿದ ಮೆರವಣಿಗೆಯಲ್ಲಿ ಕರೆದೊಯ್ಯಲಾಯಿತು.

ಧರ್ಮಸಂಘದ ಮಹಿಳಾ ಸಮ್ಮೇಳನವು ತಾ|| 10 ಮಂಗಳವಾರ ನಡೆಯಿತು. ಅನೇಕ ಮಂದಿ ಮಹಿಳೆಯರ ಘನವಾದ ವಾಗ್ಝರಿಯಿಂದ ಯುಕ್ತಾಯುಕ್ತ ಭಾಷಣ ಮಾಡಿದರು. ಧರ್ಮಸಂಘದ ಶಿಕ್ಷಕ ಮಂಡಲ ಸಮ್ಮೇಳನವು ತಾ || 10 ಸಂಜೆ ಶ್ರೀ ದ್ವಾರಕಾ ಜಗದ್ಗುರುಗಳವರ ಅಧ್ಯಕ್ಷತೆಯಲ್ಲಿ ಜರುಗಿತು. ಅಧ್ಯಕ್ಷರ ಮತ್ತಿತರ ವಿದ್ವಾಂಸರ ಭಾಷಣಗಳೂ ಮತ್ತು ಒಂದು ಮುಖ್ಯ ತರ್ಕಾವಿನ ಮಂಜೂರೂ ಆದನಂತರ ಸಮ್ಮೇಳನವು ಪರಿಸಮಾಪ್ತವಾಯಿತು.

ಶ್ರೀ ದ್ವಾರಕಾ ಜಗದ್ಗುರುಗಳು ಈ ದಿವಸ ಕಾಶಿಗೆ ಪ್ರಯಾಣ ಬೆಳೆಸಿ, ತಾ|| 14 ರಲ್ಲಿ ಇಲ್ಲಿಗೆ ವಾಪಸ್ ಬಂದು, ತಾ|| 17 ರಲ್ಲಿ ವಿಮಾನದಲ್ಲಿ ಬರೋಡಾಕ್ಕೆ ಪ್ರಯಾಣ ಬೆಳೆಸುವರು.

Save the Cow

ಗೋ ವಧೆ ನಿಲ್ಲಲಿ

Edited, Printed and Published by M S Krishna Rao at Satyavadi Press Chitradurga